ಇಲಾಖೆಗೆ ಹೊಂದಿಕೊಂಡಂತೆ ಒಬ್ಬರಿದ್ದಾರೆ. ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಅವಶ್ಯಕತೆ ಮೇಲೆ ಈ ಹುದ್ದೆಗಳನ್ನು ಏತಕ್ಕೆ ಮಾಡಬಾರದು ?

ಶ್ರೀ ಎಂ. ವೀರಪ್ಪಮೊಯ್ಲಿ.—ಸಾಮಾನ್ಯ ಅಧ್ಯಕ್ಷರೇ, ನಿರೀಕ್ಷಣಾ ಅಧಿಕಾರಿಗಳನ್ನು ಮಾಡ ಬಾರದು ಎನ್ನುವುದು ಸರ್ಕಾರದ ಉದ್ದೇಶವಲ್ಲ. ಹಿಂದುಳಿದ ವರ್ಗ, ಅಲ್ಪಸಂಖ್ಯಾತರು, ಸಮಾಜ ಕಲ್ಯಾಣ ಇಲಾಖೆ ಹಾಗೂ ಮಕ್ಕಳ ಕಲ್ಯಾಣ ಇಲಾಖೆಗೆ ಸೇರಿದಂತೆ ಒಬ್ಬರು ನಿರೀಕ್ಷಣಾ ಅಧಿಕಾರಿ ಇದ್ದರೆ ಸಾಕು. ಪ್ರತಿಯೊಂದು ಇಲಾಖೆಗೂ ಒಬ್ಬೊಬ್ಬರನ್ನು ಮಾಡುವುದರಿಂದ ಅನಾವಶ್ಯಕ ಖರ್ಚಾ ಗುತ್ತೆ. ಸಾಕಷ್ಟು ಕೆಲಸ ಒಂದೊಂದೇ ಇಲಾಖೆಯಲ್ಲಿ ಇರುವುದಿಲ್ಲ. ಕೆಲಸದ ಒತ್ತಡವನ್ನು ನೋಡಿ ಕೊಂಡು ತಾಲ್ಲೂಕು ಲೆವಲಿನಲ್ಲಿ ಮಾಡೋಣ. ಇದರ ಬಗ್ಗೆ ಪರಿಶೀಲನೆ ಮಾಡಿ ಕಳುಹಿಸಿ ಎಂದು ಬರೆಯಲಾಗಿದೆ.

ಶ್ರೀ ಎಂ. ಗಂಗಣ್ಣ.—ಹಿಂದುಳಿದ ವರ್ಗಗಳ ಡೈರೆಕ್ಟರ್ ಬಂದ ಮೇಲೆ ಎಷ್ಟೋ ಹಾಸ್ಟೆಲು ಗಳು ಬಂದಿವೆ. ವಿದ್ಯಾರ್ಥಿ ವೇತನಕ್ಕೆ, ಫೀಷಿಪ್‌ಗೆ ಸಂಬಂಧಪಟ್ಟಂತೆ ಸಾಕಷ್ಟು ಕೆಲಸ ಇದೆ ಈ ವಿಚಾರ ಜಿಲ್ಲಾ ಕಮಿಟಿಗಳನ್ನು ಮಾಡಿದ್ದಾರೆ. ಸಮಾಜ ಕಲ್ಯಾಣ ಇಲಾಖೆಯಲ್ಲಿಯೂ ಕೂಡ ಕೆಲಸದ ಹೊರೆ ಜಾಸ್ತಿ ಇದೆ. ಆದ್ದರಿಂದ ೨೦ ಹುದ್ದೆಗಳನ್ನು ಮಂಜೂರು ಮಾಡುತ್ತೀರಾ ?

ಶ್ರೀ ಎಂ. ವೀರಪ್ಪಮೊಯಿಲಿ.—ಇದು ನಿರೀಕ್ಷಣಾ ಸಹಾಯಕರ ಹುದ್ದೆಗಳಿಗೆ ಸೇರಿದ ವಿಚಾರ. ಎಲ್ಲಾ ಇಲಾಖೆಗಳನ್ನು ಪೂಲ್ ಮಾಡಿಕೊಂಡು ಒಂದು ಹುದ್ದೆ ಇದ್ದರೆ ಸಾಕೆಂದು ಸರ್ಕಾರ ಭಾವಿಸಿದೆ. ಬೇರೆ ಬೇರೆ ಇಲಾಖೆಗೆ ಒಬೊಬ್ಬರನ್ನು ನೇಮಕ ಮಾಡುವ ಅಗತ್ಯವಿಲ್ಲ ಎನ್ನುವ ಶಂಕೆಯನ್ನು ವ್ಯಕ್ತ ಪಡಿಸಿದ್ದೇವೆ. ಅಗತ್ಯ ಇದ್ದರೆ ಮಾಡೋಣ.

Held over Question from 4th List

Implementation of Compulsory Education Programme in the State.

352 SRI C. RUDRAPPA (Sandur).—Will the Minister of State for Primary and Secondary Education be pleased to state.—

(a) whether the Government is serious about implementing Compulsory Education Programme for the Children in the age group between 6-11 in the State,

(b) if so, the steps taken to provide more school buildings particularly in rural parts and also to recruit more number of teachers to cope with the work;

(c) whether any arrangement with the co-operation of primary school teachers and the betterment committees have been made to prepare statistics about school going children in each village every year to successfully implement this programme as also the adult education scheme;

(d) the amount provided in the current year's budget (*i.e.* 1980-81) for these programmes ?

SMT. NAGAMMA C. KESAVAMURTHY (Minister of State for Primary and Secondary education).—

(a) Yes (for the age group of 6-10 years).

(b) Necessary provisions are being made for implementing both the programme.

(c) Yes.

(d) (i) Construction of buildings—Rs. 138.07 lakhs.

(ii) Appointment of teachers—Rs. 32.35 lakhs.

ಶ್ರೀ ಸಿ. ರುದ್ರಪ್ಪ.—೬-೧೧ ವರ್ಷ ವಯೋಮಿತಿಯೊಳಗಿನ ಶಾಲೆಗೆ ಹೋಗದೇ ಇರತಕ್ಕ ಮಕ್ಕಳ ಸಂಖ್ಯೆ ಎಷ್ಟು ? ಇವರಿಗೆ ಬೇಕಾದ ಶಾಲಾ ಕಟ್ಟಡಗಳ ಅವಶ್ಯಕತೆ ಎಷ್ಟು ? ಬೇಕಾಗಿರತಕ್ಕ ಉಪಾಧ್ಯಾಯರ ಸಂಖ್ಯೆ ಎಷ್ಟು ? ಈ ಶಿಕ್ಷಣವನ್ನು ಕಡ್ಡಾಯವಾಗಿ ಜಾರಿಗೆ ತರಲಿಕ್ಕೆ ಕೈಗೊಂಡಿರುವ ಕಾರ್ಯಕ್ರಮಗಳೇನು ವಿವರಗಳನ್ನು ತಿಳಿಸುತ್ತೀರಾ ?

ಶ್ರೀಮತಿ ಸಿ. ನಾಗಮ್ಮ ಕೇಶವ ಮೂರ್ತಿ.—ಕಡ್ಡಾಯ ಶಿಕ್ಷಣವನ್ನು ಜಾರಿಗೆ ತಂದ ಮೇಲೆ ಸರ್ಕಾರ ಸಾಕಷ್ಟು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ ಪ್ರತಿ ವರ್ಷ ಡಿಸೆಂಬರ್ ತಿಂಗಳಲ್ಲಿ ಮೂರು ದಿವಸ ಉಪಾಧ್ಯಾಯರುಗಳನ್ನು ಎನ್ಯುಮರೇಷನ್ ಕೆಲಸಕ್ಕೆ ಕಳುಹಿಸಿ, ಶಾಲೆಗೆ ಹೋಗದೇ ಇರತಕ್ಕ ಮಕ್ಕಳ ಪಟ್ಟಿಯನ್ನು ತಯಾರು ಮಾಡಿ ಅವರು ಮುಂದಿನ ವರ್ಷದಿಂದ ಶಾಲೆಗಳಲ್ಲಿ ಎನ್ರೋಲ್ ಮಾಡುವ ಕೆಲಸವನ್ನು ಮಾಡಿದ್ದೇವೆ. ಇದರಿಂದ ೫೫ ಪರ್ಸೆಂಟ್ ಎನ್ರೋಲ್‌ಮೆಂಟ್ ಆಗಿದೆ. ಇನ್ನು ೫೫ ಪರ್ಸೆಂಟ್ ಹಿಂದುಳಿದ ವರ್ಗಗಳಲ್ಲಿ ವಿಶಿಷ್ಟ ಜನಾಂಗದ ವರ್ಗಗಳ ಮಕ್ಕಳಲ್ಲಿ ಮಾತ್ರ ಉಳಿದಿದೆ. ಹೆಚ್ಚಿಗೆ ಎನ್ರೋಲ್‌ಮೆಂಟ್ ಆಗತಕ್ಕವರಿಗೆ ಇನ್‌ಸೆಂಟೀವ್ ಕೊಡುತ್ತಾ ಬಂದಿದ್ದೇವೆ. ಆಟಿಂಡೆನ್ಸ್ ಸ್ಕಾಲರ್ ಷಿಫ್ ಕೊಡುತ್ತೇವೆ, ಪಠ್ಯ ಪುಸ್ತಕಗಳನ್ನು ಕೊಡುತ್ತೇವೆ. ಮಧ್ಯಾಹ್ನದ ಉಪಹಾರ ಕೊಡುತ್ತೇವೆ. ಈ ವರ್ಷದಲ್ಲಿ ೧೦೦೦ ಜ್ಞಾನ ಮಂದಿರಗಳನ್ನು ತೆರೆಯುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ. ಅಲ್ಲದೆ, ಈ ವರ್ಷ ೩೦೦೦ ಉಪಾಧ್ಯಾಯರ ಹುದ್ದೆಗಳನ್ನು ಕ್ರಿಯೇಷನ್ ಮಾಡಬೇಕೆಂದು ಸರ್ಕಾರಕ್ಕೆ ಕೇಳಿಕೊಂಡಿದ್ದೇವೆ. ಫ್ರೀ ಪ್ರೈಮರಿ ಶಾಲೆಗಳನ್ನು ಪ್ರಾರಂಭ ಮಾಡುವುದರಿಂದ ಶಾಲೆ ಬಿಡುವ ಮಕ್ಕಳನ್ನು ಸ್ವಲ್ಪಮಟ್ಟಿಗೆ ಕಂಟ್ರೋಲ್ ಮಾಡುವುದಕ್ಕಾಗುತ್ತದೆ. ಈ ದಿಶೆಯಲ್ಲಿ ಸಾಕಷ್ಟು ಯೋಜನೆಗಳನ್ನು ಹಾಕಿಕೊಳ್ಳಲಾಗಿದೆ.

ಶ್ರೀ ಸಿ. ರುದ್ರಪ್ಪ.—ಈ ವರ್ಷ ಎಷ್ಟು ಶಾಲೆಗಳನ್ನು ನಿರ್ಮಾಣ ಮಾಡಲಿಕ್ಕೆ ಯೋಜನೆ ಹಾಕಿಕೊಂಡಿದ್ದೀರಿ ? ಎಷ್ಟು ಜನ ಉಪಾಧ್ಯಾಯರುಗಳು ಇದ್ದಾರೆ ? ಬೇಕಾಗಿರತಕ್ಕ ಉಪಾಧ್ಯಾಯರುಗಳ ಸಂಖ್ಯೆ ಎಷ್ಟು ? ನೇಮಕಾತಿ ಮಾಡಿರತಕ್ಕ ಉಪಾಧ್ಯಾಯರುಗಳ ಸಂಖ್ಯೆ ಎಷ್ಟು ? ಎಷ್ಟು ಹಣ ಖರ್ಚು ಮಾಡಿದ್ದೀರಿ ? ಎಷ್ಟು ಹಣ ಬೇಕಾಗುತ್ತದೆ ? ವಿವರ ಕೊಡುತ್ತೀರಾ ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು).—ಹಾಲಿ ಇರತಕ್ಕ ಹುದ್ದೆಗಳು ೪,೮೯೧. ಈ ಹುದ್ದೆಗಳನ್ನು ಡಿ.ಎಲ್ ಆರ್.ಸಿ. ಮುಖಾಂತರ ತುಂಬ ಬೇಕಾಗಿದೆ. ಕೆಲವಾರು ಕಾರಣಗಳಿಂದ ಈಗ ಈ ಕಮಿಟಿಯನ್ನು ರದ್ದು ಮಾಡಲಾಗಿದೆ, ಆದಷ್ಟು ಜಾಗ್ರತೆ The other mode of recruitment will be decided and that these posts will be filled up by the next academic year.

ಶ್ರೀ ಎಂ. ಗಂಗಣ್ಣ ಭೀಮಪ್ಪ.—ಇವತ್ತು ನಿರೀಕ್ಷಿತ ಪ್ರಗತಿಯನ್ನು ಜನ ಸಂಖ್ಯೆ ವಿರಿಕೆಯಲ್ಲಿ ಪ್ರಥಮ ಸ್ಥಾನವನ್ನು ಪಡೆದಿದ್ದೇವೆ. ಜನ ಸಂಖ್ಯೆಯ ಆಧಾರದ ಮೇಲೆ ಸ್ಕೂಲ್‌ಗಳನ್ನು ಕೊಡುತ್ತೇವೆ ಎನ್ನುವಾಗ ಕೆಲವು ಪಳ್ಳಿಗಳಲ್ಲಿ ಸ್ಕೂಲುಗಳೇ ಇಲ್ಲ. ಸ್ಕೂಲು ಬೇಕೆಂದು ಕೇಳಿದಾಗ ಈ ನಿಯಮವನ್ನು ಹಾಕುತ್ತೀರಿ. ಎರಡನೆಯದು ಕಟ್ಟಡ. ಕೆಲಸವನ್ನು ನಾಲ್ಕು ವರ್ಷಗಳಿಂದಲೂ ಮಾಡುತ್ತಿದ್ದಾರೆ ಏಕೆಂದರೆ ಬೆಲೆ ಕೂಡ ಜಾಸ್ತಿಯಾಗಿದೆ. ನಾಲ್ಕು ಸಾವಿರದ ಐನೂರು ರೂಪಾಯಿ ಸರ್ಕಾರ ಕೊಡುವುದು, ೧೫೦೦ ರೂಪಾಯಿಗಳನ್ನು ಸಂಬಂಧಪಟ್ಟ ವಿರಿಯಾದವರು ಸಂಗ್ರಹಿಸುವುದು ಒಟ್ಟು ೬ ಸಾವಿರ ರೂಪಾಯಿಗಳು ಆಗುತ್ತದೆ. ೬ ಸಾವಿರ ರೂಪಾಯಿಗಳಿಂದ ಸ್ಕೂಲು ಬಿಲ್ಡಿಂಗ್ ಕಟ್ಟುವುದಕ್ಕಾಗುವುದಿಲ್ಲ. ಸ್ಕೂಲ್ ಬಿಲ್ಡಿಂಗ್ ಹಣವನ್ನು ಜಾಸ್ತಿ ಮಾಡುತ್ತೀರಾ ಎಂಬುದನ್ನು ತಿಳಿಸಬೇಕು.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ರಾಜ್ಯದಲ್ಲಿ ಜನಸಂಖ್ಯೆಯ ಆಧಾರದ ಮೇಲೆ ಅಂದರೆ ೩೦೦ ಜನ ಇರುವ ಹಳ್ಳಿಗಳಿಗೆ ಶಾಲೆಯನ್ನು ಕೊಡಬೇಕೆನ್ನುವ ನಿಯಮವನ್ನು ಇಟ್ಟುಕೊಂಡಿದ್ದೇವೆ ಅದರ ಪ್ರಕಾರ ೪ ಸಾವಿರ ಶಾಲೆಗಳನ್ನು ಕೊಡಬೇಕಾಗಿದೆ. ಈ ವರ್ಷವೇ ಈ ಕಾರ್ಯಕ್ರಮವನ್ನು ನಾವು

ಈಡೇರಿಸುತ್ತೇವೆ. ಎಲಿಜಬಲಿಟಿ ಇರುವ ಹಳ್ಳಿಗಳಲ್ಲಿ ಈ ವರ್ಷದಲ್ಲಿಯೇ ಜಾರಿಗೆ ತರಲಿಕ್ಕೆ ನಾವು ಕೆಲಸವನ್ನು ತುರು ಮಾಡಿದ್ದೇವೆ ಇನ್ನೂ ಶಾಲಾ ಕಟ್ಟಡಕ್ಕೆ ೪,೫೦೦ ಕೊಡತಕ್ಕಂತಹದ್ದು ಸಾಲುವುದಿಲ್ಲ ಎನ್ನುವ ವಿಚಾರ ಎಲ್ಲಾ ಕಡೆಗಳಿಂದಲೂ ಬರುತ್ತಿದೆ. ಅದರ ಬಗ್ಗೆ ಸೂಕ್ತ ಗಮನವನ್ನು ಸರ್ಕಾರ ಕೊಡುತ್ತದೆ ಎಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—೧೯೮೦-೮೧ನೇ ವರ್ಷದಲ್ಲಿ ಕಟ್ಟಡಗಳ ನಿರ್ಮಾಣಕ್ಕೆ ಬಜೆಟ್‌ನಲ್ಲಿ ತೆಗೆದುದಿಟ್ಟುರುವುದು ೯ ಲಕ್ಷ ರೂಪಾಯಿಗಳು. ಈ ಹಣ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ರಿಪೇರಿ ಕೆಲಸಗಳಿಗೆ ಆಗದೆ ಇರುವಾಗ ಹೆಚ್ಚಿನ ಶಾಲಾ ಕಟ್ಟಡಗಳನ್ನು ಕಟ್ಟುತ್ತೇವೆ ಎಂದು ಹೇಳುತ್ತಿದ್ದೀರಿ. ಹೆಚ್ಚಿನ ಹಣವನ್ನು ಕಟ್ಟಡಗಳಿಗೆ ಒದಗಿಸಲು ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ.

SMT. NAGAMMA C. KESHAVAMURTHY.—As per the original budget provisions it was only Rs. 9 lakhs ಮತ್ತೆ Tribal Sub-Plan Rs. 11 lakhs ಕೊಡಲಾಗಿದೆ Class rooms under Gnana Mandir Scheme Rs. 52,50,000 ಮಂಜೂರು ಮಾಡಿದ್ದೇವೆ. ಅದರ ಪ್ರಕಾರ Class rooms under special component scheme Rs 59,94,000/- total Rs. 1,32,44,000 ಕಟ್ಟಡಗಳಿಗಾಗಿ ಈ ವರ್ಷ ಖರ್ಚು ಮಾಡಿದ್ದೇವೆ.

ಶ್ರೀ ಪಿ. ರುದ್ರಪ್ಪ.—ನಾನು ಕೇಳುತ್ತಿರುವುದು Compulsory education, Primary education. It is confined only to the compulsory education and the funds allotted for this purpose during 1980-81 is Rs. 138 and odd lakhs for construction of buildings and Rs. 32.35 lakhs for appointment of teacher.

ಅಧ್ಯಕ್ಷರು.—ಕಡ್ಡಾಯ ಶಿಕ್ಷಣ ಜಾರಿಗೆ ಸಂಬಂಧಪಟ್ಟ ಪ್ರಶ್ನೆ ಕೇಳಿದ್ದಾರೆ. ತಮ್ಮ ಉತ್ತರದಲ್ಲಿ ೧೩೮ ಲಕ್ಷ ರೂಪಾಯಿಗಳನ್ನು ಕಟ್ಟಡಗಳ ನಿರ್ಮಾಣಕ್ಕಾಗಿ, ೩೨.೩೫ ಲಕ್ಷ ರೂಪಾಯಿಗಳನ್ನು ಅಧ್ಯಾಪಕರ ನೇಮಕದ ಬಗ್ಗೆ ಖರ್ಚು ಮಾಡಿದ್ದೀರಿ. ಕಡ್ಡಾಯ ಶಿಕ್ಷಣ ೬ ರಿಂದ ೧೧ ವರ್ಷ ವಯೋಮಿತಿ ಆದರ ಡಿಟೈಲ್ಸ್‌ನ್ನು ಅವರು ಬಯಸುತ್ತಾರೆ.

SMT. NAGAMMA C. KESHAVA MURTHY.—I do not think there is any differentiation.

MR. SPEAKER.—Do you know it ?

SMT. NAGAMMA C. KESHAVA MURTHY.—I have no information about it. I want notice.

MR. SPEAKER.—The Minister wants notice.

ಶ್ರೀ ಡಿ. ಜಯದೇವರಾಜ ಅರಸ್.—೧೩೮ ಲಕ್ಷ ರೂಪಾಯಿ ಕಟ್ಟಡ ನಿರ್ಮಾಣ ಹೀಗೆಂದು ಮೂರು ನಾಲ್ಕು ವಿಭಾಗಗಳಾಗಿ ಮಾಡಿದ್ದಾರೆ. ಜ್ಞಾನ ಮಂದಿರ ಪ್ರಾಥಮಿಕ ಶಾಲೆ ಕೊಡುತ್ತೇವೆ ಎಂದು ಹೇಳಿದ್ದೀರಿ. ತಾವು ನೇರವಾಗಿ ಪ್ರಾಥಮಿಕ ಶಾಲೆಗಳಿಗೆ ತಾಲ್ಲೂಕು ಬೋರ್ಡ್‌ನವರಿಗೆ ಕೊಡುವ ಹಣ ಎಷ್ಟು ? ಮಾನ್ಯ ಸ್ನೇಹಿತರು ಹೇಳಿದ ಹಾಗೆ ಕಟ್ಟಡಗಳಿಗೆ ೪,೫೦೦ ಸಾಲುವುದಿಲ್ಲ ಪಿ.ಡಬ್ಲ್ಯೂ.ಡಿ. ಕಂಟ್ರಾಕ್ಟರ್ ೧೧ ಸಾವಿರ ರೂಪಾಯಿಗಳು ಆಗುತ್ತದೆಂದು ಹೇಳಿದ್ದಾರೆ. ಈ ರೀತಿ ಆದರೆ, ಯಾವ ತಾಲ್ಲೂಕು ಬೋರ್ಡ್ ನಿರ್ವಹಿಸುವುದಕ್ಕಾಗುವುದಿಲ್ಲ. ತಾವು ಹಿಂದಿನ ವರ್ಷ ಕೊಟ್ಟಿರುವ ಕಟ್ಟಡಗಳು ಅರ್ಧಂಬರ್ಧ ಆಗಿವೆ. ಪುನಃ ಈ ರೀತಿ ಆಗುವುದಕ್ಕೆ ಅವಕಾಶ ಮಾಡಿಕೊಡುತ್ತಿದ್ದೀರಿ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಈಗ ಜ್ಞಾನ ಮಂದಿರವೆಂದು ಏನು ಕಟ್ಟಡಗಳನ್ನು ಕಟ್ಟುತ್ತಿದ್ದೇವೆ ಅಲ್ಲಿಯೂ ಸಹ ಪ್ರೈಮರಿ ಶಾಲೆಗಳನ್ನು ನಡೆಸುವುದಕ್ಕೆ ಯೋಚನೆ ಇದೆ. ಬೆಳಿಗ್ಗೆಯಿಂದ ಸಾಯಂಕಾಲದವರೆಗೂ ಖಾಲಿ ಇರುತ್ತದೆ. ಅಲ್ಲಿ ಮಕ್ಕಳು ಓದತಕ್ಕ ವ್ಯವಸ್ಥೆ ಮಾಡುವ ಯೋಚನೆ ಇದೆ. So it goes for Primary education only. ಇನ್ನು ೪,೫೦೦ ರೂಪಾಯಿ

ಗಳು ಕಟ್ಟಡಕ್ಕೆ ಸಾಲುವುದಿಲ್ಲವೆಂದು ಏನು ಹೇಳಿದ್ದಾರೆ ಅದು ಸರ್ಕಾರದ ಗಮನದಲ್ಲಿ ಇಟ್ಟುಕೊಳ್ಳಲಾಗಿದೆ.

MR. SPEAKER.—Question hour is over.

Questions for auswers on the day (but not taken up)

Incentive for Inter caste marriages.

5 SRI I. P. D. SALAPPA (Binnipet).—Will the Minister for Social Welfare and Backward Classes be pleased to state.—

(a) the number of couples who have been given benefits under the scheme incentives to those who contract intercaste Marriage with Harijans;

(b) when was Government Order issued to this effect ;

(c) whether the Social Welfare Department has tried to adopt any ways and means to popularise this scheme which helps cradication of caste system ;

(d) whether Government intends to apply this scheme among non-Harijans also so that abolition of caste system could be achieved earlier ;

(e) whether Government intend to explore the possibility of of constituting an agency to popularise inter-caste marriages ?

SRI P. VENKATARAMANA (Minister for Social Welfare and Backward Castes)—

(a) The financial (benefits) assistance given to the couple who contract inter-caste marriage from 1975 onwards at Rs. 2,000 per couple are as follows.—

	Year	*No. of cases* (couple)	*Amount sanctioned*
1	1975-76	3 Cases	Rs. 6,000/-
2	1976-77	2 Cases	Rs. 4,000/-
3	1977-78	11 Cases	Rs. 22,000/-
4	1978-79	12 Cases	Rs. 24,000/-
5	1979-80	22 Cases	Rs. 44,000/-

(b) Government Order was issued on 10-1-1974 *vide* G.O. No. SWD 86/ SAD 71.

(c) This is being done by ways of publicity and propaganda by the Department of Social Welfare in order to popularise the scheme of removal of untouchability and eradication of caste system.—